# ಶ್ರೀಮತ್ಸುಜಯೀಂದ್ರತೀರ್ಥಶುಭಾಶಂಸನ ಪಂಚರತ್ನಮಾಲಿಕಾ

-ಶ್ರೀರಾಘವೇಂದ್ರ ಗುರುವಂಶಭೂಷಣಂ ರಾಜಾ ಶ್ರೀ ಗುರುರಾಜಾಚಾರ್ಯರು

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯೇತ್ಯಾದ್ಯಮಂದಬಿರುದಬೃಂದವಿಭೂಷಿತ ಶ್ರೀಮದ್ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ ಶ್ರೀಮನ್ಮಧ್ವಾಚಾರ್ಯ ಮೂಲಮಹಾ ಸಂಸ್ಥಾನಾಧೀಶ್ವರ ಷಡ್ದರ್ಶನಾಚಾರ್ಯ ಶ್ರೀಮದ್ರಾಘವೇಂದ್ರ ಗುರುಸಾರ್ವಭೌಮಮಠೀಯ ವೇದಾಂತ ಸಾಮ್ರಾಜ್ಯ ದಿಗ್ವಿಜಯವಿದ್ಯಾಸಿಂಹಾಸನಾಧೀಶ್ವರ ಶ್ರೀಮತ್ಸುವ್ರತೀಂದ್ರತೀರ್ಥ ಶ್ರೀಪಾದಕರಕಮಲಸಂಜಾತಶ್ರೀಮತ್ಸುಯಮೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರಕರಾದ ಪರಮಪೂಜ್ಯ 104 ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರು ಶ್ರೀ ಸರ್ವಜ್ಞಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾಗಿ ಇದೇ ಆಶ್ವೀನ ಕೃಷ್ಣ ಪಂಚಮಿಗೆ ಹತ್ತುವರ್ಷಗಳಾದವು. ಈ ಹತ್ತುವರ್ಷಗಳಲ್ಲಿ ಶ್ರೀಪಾದಂಗಳವರು ದ್ವೈತಸಿದ್ಧಾಂತ ಪ್ರಸಾರ, ವಿದ್ವತ್ಸಭೆ, ವಿದ್ವಾಂಸರು ಮತ್ತು ವಿದ್ಯಾರ್ಥಿಗಳ ಪೋಷಣೆ, ಶ್ರೀಮಂತ್ರಾಲಯದ ಸರ್ವತೋಮುಖವಾದ ಅಭಿವೃದ್ಧಿ, ಶ್ರೀಗುರುರಾಜರ ಮಹಿಮಾಪ್ರಸಾರ ಮುಂತಾಗಿ ಅಸಾಧಾರಣಕಾರ್ಯಗಳನ್ನು ಬಹು ಯಶಸ್ಕರವಾಗಿ ನೆರವೇರಿಸುತ್ತಾ ಲೋಕಕಲ್ಯಾಣಾಸಕ್ತರಾಗಿ ಶಿಷ್ಯ-ಭಕ್ತವೃಂದ, ಪಂಡಿತಮಂಡಲಿಗಳಿಂದ ಮಾನ್ಯರಾಗಿದ್ದಾರೆ. ಇಂತಹ ಮಹಾನುಭಾವರಾದ ನಮ್ಮ ಪೂಜ್ಯ ಶ್ರೀಪಾದಂಗಳವರ ಹತ್ತನೆಯ ವೇದಾಂತಸಾಮ್ರಾಜ್ಯ ಪಟ್ಟಾಭಿಷೇಕೋತ್ಸವದ ಮಂಗಳಸಂದರ್ಭದಲ್ಲಿ ಶ್ರೀಗುರುಸಾರ್ವಭೌಮರ ಪ್ರೇರಣೆಯಂತೆ ಅವರೇ ನುಡಿಸಿದ ಈ ಶುಭಾಶಂಸನ ಪಂಚರತ್ನಮಾಲಿಕೆಯನ್ನು ಶ್ರೀಯವರ ಪಾದಕಿಂಕರನಾದ ನಾನು ಶ್ರೀಚರಣಕಮಲಗಳಲ್ಲಿ ಭಕ್ತಿಪೂರ್ವಕ ಸಮರ್ಪಿಸುತ್ತಾ ನಮ್ಮ ಪೂಜ್ಯ ಶ್ರೀಪಾದಂಗಳವರು ವೇದಾಂತವಿದ್ಯಾರಾಜ್ಯಸಿಂಹಾಸನದಲ್ಲಿ ಬಹುಕಾಲ ವಿರಾಜಿಸಿ ನಮ್ಮೆಲ್ಲರನ್ನೂ ಕಾಪಾಡಿಕೊಂಡು ಬರುವಂತೆ ಅವರಿಗೆ ಆಯುರಾರೋಗ್ಯಾದಿಗಳನ್ನು ಕರುಣಿಸುವಂತೆ ಶ್ರೀಮಂತ್ರಾಲಯಪ್ರಭುಗಳಲ್ಲಿಯೂ ಅವರ ಅಂತರ್ಗತರಾದ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮೂಲರಾಮಚಂದ್ರಾಭಿನ್ನ ಶ್ರೀಶ್ರೀನಿವಾಸ ದೇವರಲ್ಲಿ ಭಕ್ತಿಶ್ರದ್ಧೆಗಳಿಂದ ಪ್ರಾರ್ಥಿಸುತ್ತಾ ಶುಭಾಶಂಸನಪಂಚರತ್ನ ಮಾಲಿಕೆಯನ್ನು ಪಠಿಸಿ ಸಮರ್ಪಿಸುತ್ತೇನೆ.

**ಶ್ರೀದ್ಧಂಸಸುವಂಶದೀಪಕ ಯತೀಂದ್ರಾಢ್ಯೇ ಪರೇ ಶೋಭನೇ**
**ಶ್ರೀಮನ್ಮಧ್ವಮುನೀಂದ್ರ ರಂಜಿತ ಮಹಾವಿದ್ಯಾಹರೀಂದ್ರಾಸನೇ ।**
**ಟೀಕಾಕೃದ್ವಿಬುಧೇಂದ್ರಮಂತ್ರನಿಲಯಾಧೀಶೈರಲಂಶಾಸಿತೇ-**
**ಜೀಯಾಚ್ಛ್ರೀಸುಜಯೀಂದ್ರ ದೇಶಿಕಭರುಃ ವೇದಾಂತರಾಜ್ಯೇ ಚಿರಮ್ ॥ 1 ॥**

**ತಾತ್ಪರ್ಯ :** ಶ್ರೀಮದ್ವೇದಪ್ರತಿಪಾದ್ಯನೂ, ಸಂಪದ್ಯುಕ್ತನೂ, ಕಾಂತಿಸಂಪನ್ನನೂ ಆದ ಶ್ರೀಹಂಸನಾಮಕ ಪರಮಾತ್ಮನ ಶ್ರೇಷ್ಠ ಪರಮಹಂಸವಂಶದೀಪಕರಾದ ಯತಿವರ್ಯರಿಂದ ಪೂರ್ಣವಾದ, ಶ್ರೇಷ್ಠವಾದ ಮತ್ತು ಮಂಗಳಕರವಾದ, ವೇದಪ್ರತಿಪಾದ್ಯರೂ ಕಾಂತಿಸಂಪನ್ನರೂ ಆದ ಶ್ರೀಮಧ್ವಾಚಾರ್ಯರೆಂಬ ಮುನಿಶ್ರೇಷ್ಠರಿಂದ ರಂಜಿಸಲ್ಪಟ್ಟ (ಅಲಂಕೃತವಾದ) ವಿದ್ಯಾಸಿಂಹಾಸನದಲ್ಲಿ, ಶ್ರೀ ಟೀಕಾಕೃತ್ಪಾದರು, ಶ್ರೀವಿಬುಧೇಂದ್ರತೀರ್ಥರು, ಶ್ರೀಮಂತ್ರಾಲಯ ಶ್ರೀಪಾದಂಗಳವರು ಇದರಿಂದ ಚೆನ್ನಾಗಿ ಆಳಲ್ಪಟ್ಟ ಶ್ರೀ ದ್ವೈತವೇದಾಂತಸಾಮ್ರಾಜ್ಯದಲ್ಲಿ ಶ್ರೀಸುಜಯೀಂದ್ರತೀರ್ಥಯತಿವರ್ಯರು ಚಿರಕಾಲ ಜಯಶೀಲರಾಗಿ ಕಂಗೊಳಿಸಲಿ.

Rarest Archiver

**ಮಾಯಾವಾದಕುಲಾದ್ರಿಗರ್ವದಲನೇ ವಾಗ್ವಜ್ರಸಂಭೂಷಿತಃ**

**ಶ್ರೀಮನ್ಮಧ್ವವರಾಸನಾಮರಗಜಾರೂಢೋ ಯತೀಂದ್ರೋಽಜಸಾ ।**

**ಲೋಕಾಭೀಷ್ಟದ ಕಾಮಧುಙ್ಮಣಿತರುರ್ಭೂದೇವ ಸಂಸೇವಿತಃ**

**ಜೀಯಾಚ್ಛ್ರೀಸುಜಯೀಂದ್ರಸಂಯಮಿಭರುಃ ವೇದಾಂತರಾಜ್ಯೇಚಿರಮ್ ॥ 2 ॥**

**ತಾತ್ಪರ್ಯ** : ಶ್ರೀ ಮೂಲರಾಮಾರ್ಚನೆಯ ಪ್ರಭಾವದಿಂದ ಶ್ರೀಮತ್ಸುಜಯೀಂದ್ರತೀರ್ಥಶ್ರೀಪಾದಂಗಳವರು ಅಮರಾಧಿಪತಿಯಾದ ದೇವೇಂದ್ರನಂತೆ ವೈಭವಸಂಪತ್ತುಗಳಿಂದ ವಿರಾಜಮಾನರಾಗಿರುವ ಭಾಗ್ಯಶಾಲಿಗಳು. ದೇವೇಂದ್ರನು ಅಮರೇಂದ್ರನಾದರೆ ಇವರು ಭೂಸುರೇಂದ್ರರು. ಅವನ ಎಲ್ಲ ವೈಭವ ಸಂಪತ್ತುಗಳೂ ಇವರಲ್ಲಿಯೂ ಇದೆ. ದೇವೇಂದ್ರನು ಪರ್ವತಗಳ ಗರ್ವಪರಿಹರಿಸಲು ವಜ್ರಧಾರಿಯಾಗಿ 'ಗಿರಿಭಿತ್' ಎಂದು ಖ್ಯಾತನಾಗಿದ್ದಾನೆ. ಇವರು ಮಾಯಾಮತವೆಂಬ ಪರ್ವತಗಳ ಗರ್ವವನ್ನು ಪರಿಹರಿಸಲು ಸಮರ್ಥವಾದ ವಾಗ್ವಜ್ರದಿಂದ ಭೂಷಿತರಾಗಿ "ಅರಿವಾದಿಭಿತ್" ಎಂದು ಖ್ಯಾತರಾಗಿದ್ದಾರೆ. ಇಂದ್ರನು ಐರಾವತದ ಮೇಲೆ ವಿರಾಜಿಸಿದರೆ ಇವರು ಶ್ರೀಮಧ್ವಾಚಾರ್ಯರ ಮಹಾಸ್ಥಾನಪೀಠವೆಂಬ ಐರಾವತವನ್ನೇರಿ ರಾಜಿಸುತ್ತಿದ್ದಾರೆ. ನಾಕಿನಾಯಕನು ಉಪೇಂದ್ರಾರ್ಚಕನಾಗಿ ಆ ವೈಭವವನ್ನು ಪಡೆದಿದ್ದರೆ ಇವರು ಮೂಲರಾಮನೆಂಬ ಉಪೇಂದ್ರಾರ್ಚಕರಾಗಿ ಅದನ್ನು ಪಡೆದಿದ್ದಾರೆ. (ಅವನು ಸುರೇಂದ್ರನಾದರೆ ಇವರು ಯತೀಂದ್ರರಾಗಿದ್ದಾರೆ. ಇಲ್ಲಿ ಯತೀಂದ್ರ ಶಬ್ದವು ಸ್ವಾರಸ್ಯವಾಗಿದೆ. ಅವನು ಇಂದ್ರನು ಅಂದರೆ ಸಂಪತ್ತಿನಿಂದ ಪೂರ್ಣನು ಅಂತೆಯೇ ಅವನು ಒಮ್ಮೊಮ್ಮೆ ಸಂಪತ್ತಿನ ಮದದಿಂದ ಮೈಮರೆತು ಅಕಾರ್ಯವನ್ನು ಮಾಡುವುದುಂಟು. ಆದರೆ ಇವರು ಯತೀಂದ್ರರು ಅಂದರೆ ಇಂದ್ರಿಯನಿಗ್ರಹವುಳ್ಳವರು. ಆದ್ದರಿಂದ ಸಂಪತ್ತಿನ ವೈಭವದಿಂದ ಮದಿಸಿ ಅಕಾರ್ಯಮಾಡುವವರಲ್ಲ, ನಿಗ್ರಹವುಳ್ಳವರು ಎಂದು ಯತೀಂದ್ರಶಬ್ದವು ಶ್ರೀಪಾದರ ಮಹತ್ವವನ್ನು ಎತ್ತಿ ತೋರುವುದು.)

ದೇವೇಂದ್ರನಲ್ಲಿ ಜನತೆಯ ಮನೋಭೀಷ್ಟಗಳನ್ನು ಪೂರ್ಣಮಾಡುವ ಕಾಮಧೇನು, ಚಿಂತಾಮಣಿ, ಕಲ್ಪವೃಕ್ಷಗಳಿವೆ. ಇವರಲ್ಲಿಯೂ (ಈ ವೇದಾಂತ ರಾಜ್ಯದಲ್ಲಿಯೂ) ಶ್ರೀಮಧ್ವರೆಂಬ ಕಾಮಧೇನು, ಜಯತೀರ್ಥರೆಂಬ ಚಿಂತಾಮಣಿ, ರಾಘವೇಂದ್ರರೆಂಬ ಕಲ್ಪವೃಕ್ಷಗಳಿವೆ. ಅವೆಲ್ಲದರ ಅನುಗ್ರಹಬಲದಿಂದ ಶ್ರೀಪಾದರು ಸ್ವಯಂ ಅಶೇಷ ಭಕ್ತಜನರ ಮನೋಭೀಷ್ಟಗಳನ್ನು ಈಡಾಡುವ ಕಾಮಧೇನು, ಚಿಂತಾಮಣಿ, ಕಲ್ಪವೃಕ್ಷರಾಗಿದ್ದಾರೆ. ಇಂದ್ರನು ದೇವಗಣ ಸಂಸೇವಿತನು. ಇವರು ಭೂದೇವಗಣ (ಭೂಸುರರು) ಸಂಸೇವ್ಯರಾಗಿದ್ದಾರೆ. ಇಂತಹ ಮಹಾವೈಭವದಿಂದ ಕಂಗೊಳಿಸುವ ಶ್ರೀಸುಜಯೀಂದ್ರ ಯತಿವರ್ಯರು ವೇದಾಂತರಾಜ್ಯದಲ್ಲಿ ಚಿರಕಾಲ ಜಯಶೀಲರಾಗಲಿ ಎಂದು ಭಾವ.

**ಶ್ರೀಮಚ್ಛಾಷ್ಠಿಕವಂಶದೀಪಕಮಣೇಃ ಷಡ್‌ದರ್ಶಿನೀದರ್ಶಿನಃ**

**ತತ್ತಾದೃಗ್ಗುರುರಾಘವೇಂದ್ರಯತಿರಾಡ್ವಂಶ ದ್ವಯೋಲ್ಲಾಸಕಃ ।**

**ಶ್ರೀಮತ್ಸಂಯಮಿಧುರ್ಯಚರ್ಯಕರುಣಾಸಂಪ್ರಾಪ್ತತುರ್ಯಾಶ್ರಮಃ**

**ಜೀಯಾಚ್ಛ್ರೀ ಸುಜಯೀಂದ್ರ ಸಂಯಮಿಭರುಃ ವೇದಾಂತರಾಜ್ಯೇ ಚಿರಮ್ ॥ 3 ॥**

**ತಾತ್ಪರ್ಯ** : ಸಮಸ್ತವಿದ್ಯೆಗಳಿಗೆ ಮಾತೃಸ್ಥಾನವೆನಿಸಿದ ಸಂಪದ್ಯುಕ್ತವಾದ ಷಾಷ್ಠಿಕವಂಶವನ್ನು ಬೆಳಗಿಸುವ ದಿನಮಣಿಗಳಾದ, ಷಡ್ದರ್ಶನಾಚಾರ್ಯರಾದ, ಜಗದ್ವಿಖ್ಯಾತರಾದ (ಅಂಥ) ಗುರುಸಾರ್ವಭೌಮ ಶ್ರೀರಾಘವೇಂದ್ರತೀರ್ಥ ಯತಿಪುಂಗವರ ಉಭಯ ವಂಶಗಳನ್ನು ವಿಕಾಸಗೊಳಿಸುವವರಾದ, ಸಂಪದ್ಯುಕ್ತರೂ, ಕಾಂತಿಸಂಪನ್ನರೂ ಆದ ಶ್ರೀಮತ್ಸುಯಮೀಂದ್ರತೀರ್ಥಯತಿ ಶ್ರೇಷ್ಠರ ಪರಿಚರ್ಯ ಮತ್ತು ಅವರ ಕಾರುಣ್ಯದಿಂದ ಸಂಪ್ರಾಪ್ತವಾದ ಪರಮಹಂಸಾಶ್ರಮವುಳ್ಳ ಶ್ರೀ ಸುಜಯೀಂದ್ರತೀರ್ಥ ಯತಿವರ್ಯರು ವೇದಾಂತಸಾಮ್ರಾಜ್ಯದಲ್ಲಿ ಚಿರಕಾಲ ಜಯಶೀಲರಾಗಿ ಕಂಗೊಳಿಸಲಿ.

Rarest Archive

ಶ್ರೀಬ್ರಹ್ಮಾರ್ಚಿತಮೂಲರಾಮಚರಣಾಂಭೋಜದ್ವಿರೇಫಾಯಿತಃ ।
ಮಾಯಾವಾದಿಕರೀಂದ್ರಗರ್ವದಲನೇ ಸಿಂಹಪ್ರಬರ್ಹಾಯಿತಃ ॥
ಸತ್ಸಿದ್ಧಾಂತಮಹಾಬ್ಧಿವೃದ್ಧಿಕರಣೇ ಪ್ರೋದ್ಯತ್ತುಷಚಂದ್ರಾಯಿತಃ ।
ಜೀಯಾಚ್ಛ್ರೀ ಸುಜಯೀಂದ್ರ ಸಂಯಮಿಭರುಃ ವೇದಾಂತರಾಜ್ಯೇ ಚಿರಮ್ ॥ 4 ॥

ತಾತ್ಪರ್ಯ : ಶ್ರೀಸುಜಯೀಂದ್ರತೀರ್ಥರ ಮಹಿಮೆ ಅಸಾಧಾರಣವಾದುದು. ವೇದಾಂತ ಸಾಮ್ರಾಜ್ಯ ಸಿಂಹಾಸನಾಧೀಶ್ವರರು ನೆರವೇರಿಸಬೇಕಾದ ಮೂರು ಮುಖ್ಯ ಕರ್ತವ್ಯಗಳಿವೆ. ಅವೆಂದರೆ ಸರ್ವಸಮರ್ಪಣ ಬುದ್ಧಿಯಿಂದ ಭಗವಂತನನ್ನು ಅನವರತ ಆರಾಧಿಸುವುದು. ಪರವಾದಿದಿಗ್ವಿಜಯ, ಪಾಠಪ್ರವಚನಾದಿಗಳ ಮೂಲಕ ವೈದಿಕಸದ್ವೈಷ್ಣವಸಿದ್ಧಾಂತವನ್ನು ಚೆನ್ನಾಗಿ ಪ್ರಸಾರಮಾಡುವುದು. ಈ ಮೂರೂ ಕರ್ತವ್ಯಗಳನ್ನು ನಮ್ಮ ಪೂಜ್ಯ ಶ್ರೀಪಾದಂಗಳವರು ಅತ್ಯಂತ ಯಶಸ್ವಿಯಾಗಿ ನೆರವೇರಿಸುತ್ತಾ ಸರ್ವರಿಂದ ಮಾನ್ಯರಾಗಿದ್ದಾರೆ. ನಮ್ಮ ಗುರುವರ್ಯರು ಸಾಕ್ಷಾತ್ ಶ್ರೀ ಬ್ರಹ್ಮದೇವರು ಪೂಜಿಸಿದ ಚತುರ್ಯುಗಮೂರ್ತಿಯಾದ, ಪರಬ್ರಹ್ಮಸ್ವರೂಪನಾದ ಶ್ರೀಮೂಲರಾಮಚಂದ್ರದೇವರ ಪಾದಕಮಲಗಳಿಗೆ ಮಧುಕರನಂತಿದ್ದಾರೆ. ಜೀವೇಶ್ವರೈಕ್ಯ, ಜಗನ್ಮಿಥ್ಯಾ, ಭಗವಂತ ನಿರ್ಗುಣ, ನಿರಾಕಾರ ಮುಂತಾಗಿ ಹೇಳುವ ಮಾಯಾವಾದಿಗಳೆಂಬ ಗಜಶ್ರೇಷ್ಠಗಳ ಗರ್ವವನ್ನು ಪರಿಹರಿಸುವುದರಲ್ಲಿ ಶ್ರೇಷ್ಠ ಸಿಂಹದಂತಿದ್ದಾರೆ. ದ್ವೈತಸಿದ್ಧಾಂತವೆಂಬ ಕ್ಷೀರಸಮುದ್ರವನ್ನು ಉಕ್ಕೇರಿಸುವುದರಲ್ಲಿ ಪೂರ್ಣಚಂದ್ರಮರಂತಿದ್ದಾರೆ. ಇಂತಹ ಮಹಾಮಹಿಮರಾದ ಶ್ರೀಸುಜಯೀಂದ್ರತೀರ್ಥಯತಿರಾಜರು ವೇದಾಂತಸಾಮ್ರಾಜ್ಯದಲ್ಲಿ ಚಿರಕಾಲ ಜಯಶೀಲರಾಗಿ ಕಂಗೊಳಿಸಲಿ ಎಂದು ಭಾವ.

ಮೂಲೇಲಾಜನಿಜಾನಿ ಪಾದನಲಿನಂ ಸಂಸೇವಯನ್ ಸರ್ವದಾ
ಶ್ರೀಮದ್ವೈಷ್ಣವತತ್ವಶಾಸ್ತ್ರಮನಿಶಂ ಸಂಪಾಠಯನ್ ಪಾಲಯನ್ ।
ವಿದ್ವಚ್ಛಿಷ್ಯಗಣಾನ್ನಿಜಾಶ್ರಿತಸಜನಾನ್ ಸಂಪೋಷಯನ್ ತೋಷಯನ್
ಜೀಯಾಚ್ಛ್ರೀಸುಜಯೀಂದ್ರ ಸಂಯಮಿಭರುಃ ವೇದಾಂತರಾಜ್ಯೇ ಚಿರಮ್ ॥ 5 ॥

ತಾತ್ಪರ್ಯ : ಶ್ರೀಮದಾಚಾರ್ಯರ ಮಹಾಸಂಸ್ಥಾನದ ಮುಖ್ಯ ಆರಾಧ್ಯಮೂರ್ತಿಯಾದ ಶ್ರೀಮೂಲಸೀತಾಪತಿಯಾದ ಶ್ರೀಮೂಲರಾಮಚಂದ್ರನ ಪಾದಕಮಲಗಳನ್ನು ಸರ್ವದಾ ಚೆನ್ನಾಗಿ ಸೇವಿಸುತ್ತಾ, ಶ್ರೀಮದ್ವಿಷ್ಣುಸರ್ವೋತ್ತಮತ್ವ ಪ್ರತಿಪಾದಕ ತತ್ತ್ವಶಾಸ್ತ್ರವನ್ನು ಯಾವಾಗಲೂ ಶಿಷ್ಯಸಮೂಹಕ್ಕೆ ಪ್ರವಚನ ಮಾಡಿಸುತ್ತಾ ದ್ವೈತಸಿದ್ಧಾಂತವನ್ನು ಸಂರಕ್ಷಿಸುತ್ತಾ, ವಿದ್ವಜ್ಜನರು, ಶಿಷ್ಯಸಂದೋಹವನ್ನು ಮತ್ತು ತಮ್ಮನ್ನು ಆಶ್ರಯಿಸಿದ ಸ್ವಜನರನ್ನೂ ಪೋಷಿಸುತ್ತಾ, ಸಂತೋಷಪಡಿಸುತ್ತಾ, ಶ್ರೀ ಸುಜಯೀಂದ್ರತೀರ್ಥ ಯತೀಂದ್ರರು ಚಿರಕಾಲ ವೇದಾಂತ ಸಾಮ್ರಾಜ್ಯದಿಗ್ವಿಜಯ ವಿದ್ಯಾ ಸಿಂಹಾಸನದಲ್ಲಿ ಜಯಶೀಲರಾಗಿ ವಿರಾಜಿಸಲಿ ಎಂದು ಭಾವ.

ಶ್ರೀರಾಘವೇಂದ್ರಸದ್ವಂಶ್ಯಶ್ರೀನಿವಾಸತನೂಭುವಾ ।
ಗುರುರಾಜಾಭಿಧಾಭಕ್ತ್ಯಾ ಮಾಲಾಶ್ರೀಚರಣೇಽರ್ಪಿತಾ ॥

ತಾತ್ಪರ್ಯ : ಶ್ರೀಮದ್ರಾಘವೇಂದ್ರಗುರುಸಾರ್ವಭೌಮರ ಪೂರ್ವಾಶ್ರಮ ಪವಿತ್ರವಂಶಸಂಜಾತರಾದ ಶ್ರೀ ಶ್ರೀನಿವಾಸ ಮೂರ್ತ್ಯಾಚಾರ್ಯರ ಪುತ್ರನಾದ ರಾಜಾಗುರುರಾಜಾಚಾರ್ಯನಿಂದ ಈ ಶುಭಾಶಂಸನ ಮಾಲಿಕೆಯು ಶ್ರೀಮತ್ಪೂಜ್ಯ ಶ್ರೀಪಾದಂಗಳವರ ಚರಣಕಮಲಗಳಲ್ಲಿ ಭಕ್ತಿಪೂರ್ವಕವಾಗಿ ಸಮರ್ಪಿತವಾಗಿದೆ.

Rarest Archiver